ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1412

ಸದಸ್ಯರ ಹೆಸರು : ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 18.03.2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ, ಎಷ್ಟು ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ, ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
<table>
<tr><th>ಕ್ರ ಸಂ</th><th>ಜಿಲ್ಲೆಯ ಹೆಸರು</th><th>ಖಾಲಿ ಇರುವ ಪ್ರ.ದ.ಸ ಸಂಖ್ಯೆ</th><th>ಖಾಲಿ ಇರುವ ಅವಧಿ</th></tr>
<tr><td>1.</td><td>ಯಾದಗಿರಿ</td><td>03</td><td>2 ಹುದ್ದೆ 5 ವರ್ಷಗಳಿಂದ 1 ಹುದ್ದೆ 3 ವರ್ಷಗಳಿಂದ ಖಾಲಿ ಇವೆ.</td></tr>
<tr><td>2.</td><td>ಕಲಬುರಗಿ</td><td>63</td><td>01 ವರ್ಷದಿಂದ ಖಾಲಿ ಇವೆ</td></tr>
<tr><td>3.</td><td>ಬಳ್ಳಾರಿ</td><td>08</td><td>04 ತಿಂಗಳಿಂದ ಖಾಲಿ ಇವೆ</td></tr>
<tr><td>4.</td><td>ಬೀದರ್</td><td>16</td><td>ಆರು ತಿಂಗಳಿಂದ ಖಾಲಿ ಇವೆ</td></tr>
<tr><td>5.</td><td>ರಾಯಚೂರು</td><td>12</td><td>2015 ರಿಂದ ಖಾಲಿ ಇವೆ</td></tr>
<tr><td>6.</td><td>ಕೊಪ್ಪಳ</td><td>17</td><td>ಆರು ತಿಂಗಳಿಂದ ಖಾಲಿ ಇವೆ</td></tr>
<tr><td colspan="2">ಒಟ್ಟು</td><td>119</td><td></td></tr>
</table></td></tr>
<tr><td>(ಆ)</td><td>ಸದರಿ ಎಫ್.ಡಿ.ಎ. ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕೆ.ಪಿ.ಎಸ್.ಸಿ.ಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; ಇದ್ದಲ್ಲಿ ಯಾವ ದಿನಾಂಕಗಳಂದು ಸಲ್ಲಿಸಲಾಗಿದೆ; ಇಲ್ಲದಿದ್ದಲ್ಲಿ, ಸಲ್ಲಿಸದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td><u>ಯಾದಗಿರಿ ಜಿಲ್ಲೆ</u>:- ಈ ಹಿಂದೆ ಹೈದ್ರಾಬಾದ್ ಕರ್ನಾಟಕ ರಚನೆಯಾದ ಸಂದರ್ಭದಲ್ಲಿ ಪ್ರಸ್ತುತ ಹುದ್ದೆಗಳನ್ನು ಸ್ಥಳೀಯ ವೃಂದದ ಮತ್ತು ಮಿಕ್ಕುಳಿದ ವೃಂದಗಳಿಗೆ ಹಂಚಿಕೆ ಮಾಡಿದಾಗ ಮಿಕ್ಕುಳಿದ ವೃಂದದಲ್ಲಿ 02 ಪ್ರ.ದ.ಸ. ಹುದ್ದೆಗಳು ನೇರನೇಮಕಾತಿ ಕೋಟಾದಡಿ ಖಾಲಿ ಇದ್ದು, ಅದರಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ: 08.09.2016ರ ಪತ್ರದ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br><u>ಕಲಬುರಗಿ ಜಿಲ್ಲೆ</u>:- ಎ) ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಪ್ರ.ದ.ಸ. ಹುದ್ದೆಗಳ ನೇಮಕಾತಿಗಾಗಿ ದಿನಾಂಕ: 04.10.2016 ರಂದು</td></tr>
</table>

| | | |
|---|---|---|
| | | ಕೆ.ಪಿ.ಎಸ್.ಸಿ. ಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. (ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ)<br>ಬಿ) ಪ್ರಸ್ತುತ ನೇರ ನೇಮಕಾತಿ ಕೋಟಾದಡಿಯಲ್ಲಿ 19 ಹುದ್ದೆಗಳು ಖಾಲಿಯಾಗಿರುವುದರಿಂದ ಶೀಘ್ರವೇ ಕೆ.ಪಿ.ಎಸ್.ಸಿ.ಗೆ ಪ್ರಸ್ತಾವನೆ ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.<br>ಬಳ್ಳಾರಿ ಜಿಲ್ಲೆ:- ಈ ಜಿಲ್ಲೆಗೆ ಅನುಕಂಪ ಆಧಾರದ ಮೇಲೆ ನೇರ ನೇಮಕಾತಿ ಅಡಿಯಲ್ಲಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಭರ್ತಿ ಮಾಡಬೇಕಾಗಿರುವುದರಿಂದ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ.ಗೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.<br>ಬೀದರ ಜಿಲ್ಲೆ:- ದಿನಾಂಕ: 07.11.2016 ರಂದು 2 ಪ್ರ.ದ.ಸ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಕೆ.ಪಿ.ಎಸ್.ಸಿ. ಗೆ ಸಲ್ಲಿಸಲಾಗಿದೆ.<br>ರಾಯಚೂರು ಜಿಲ್ಲೆ:- ದಿನಾಂಕ: 17.03.2017 ರಂದು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಕೆ.ಪಿ.ಎಸ್.ಸಿ. ಗೆ ಸಲ್ಲಿಸಲಾಗಿದೆ<br>ಕೊಪ್ಪಳ ಜಿಲ್ಲೆ:- ನೇರ ನೇಮಕಾತಿ ಕೋಟಾದಡಿಯಲ್ಲಿ ಖಾಲಿ ಇರುವ 6 ಪ್ರ.ದ.ಸ. ಹುದ್ದೆಗಳಿಗೆ ದಿನಾಂಕ: 02.05.2019 ರಂದು ಕೆ.ಪಿ.ಎಸ್.ಸಿ.ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ.ಯಿಂದ ದಿನಾಂಕ: 31.01.2020 ರಂದು ಅಧಿಸೂಚನೆ ಹೊರಡಿಸಲಾಗಿದೆ. |
| (ಇ) | ಕೆ.ಪಿ.ಎಸ್.ಸಿ. ವತಿಯಿಂದ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಇತ್ತೀಚಿನ ಯಾವ ವರ್ಷದಲ್ಲಿ ಎಷ್ಟು ಎಫ್.ಡಿ.ಎ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಯಾದಗಿರಿ ಜಿಲ್ಲೆ:- ಯಾದಗಿರಿ ಜಿಲ್ಲೆಯಲ್ಲಿ ಯಾವುದೇ ಪ್ರ.ದ.ಸ. ಹುದ್ದೆಗಳನ್ನು ಕೆ.ಪಿ.ಎಸ್.ಸಿ. ವತಿಯಿಂದ ಇದುವರೆಗೂ ಭರ್ತಿ ಮಾಡಿರುವುದಿಲ್ಲ.<br>ಕಲಬುರಗಿ ಜಿಲ್ಲೆ:- ಕೆ.ಪಿ.ಎಸ್.ಸಿ. ವತಿಯಿಂದ ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಗೆ ದಿನಾಂಕ: 09.11.2018 ರಂದು ಸ್ಥಳೀಯ ವೃಂದದ-11 ಹಾಗೂ ಮಿಕ್ಕುಳಿದ ವೃಂದದ-03 ಒಟ್ಟು 14 ಪ್ರ.ದ.ಸ. ಅಭ್ಯರ್ಥಿಗಳನ್ನು ನೇಮಕ ಮಾಡಿ ಜಿಲ್ಲಾಧಿಕಾರಿಗಳ ಅಧೀನಕ್ಕೆ ನೀಡಿರುತ್ತಾರೆ. ಇದರಲ್ಲಿ 8 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಇನ್ನುಳಿದ 6 ಅಭ್ಯರ್ಥಿಗಳಿಗೆ ಅವರ ಸಿಂಧುತ್ವ ಹಾಗೂ ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯ ಪರಿಶೀಲನೆ ಹಂತದಲ್ಲಿರುತ್ತದೆ.<br>ಬಳ್ಳಾರಿ ಜಿಲ್ಲೆ:- ಕೆ.ಪಿ.ಎಸ್.ಸಿ. ಯಿಂದ ಆಯ್ಕೆಗೊಂಡ 07 ಎಫ್.ಡಿ.ಎ. ಅಭ್ಯರ್ಥಿಗಳಿಗೆ ನೇರ ನೇಮಕಾತಿ ಅಡಿಯಲ್ಲಿ ಜಿಲ್ಲಾಧಿಕಾರಿ ಕಛೇರಿ ಆದೇಶ ಸಂಖ್ಯೆ/ಕಂ/ಸಿಬ್ಬಂದಿ1/251/2014-15 ದಿನಾಂಕ: 25.07.2019ರ ಮೂಲಕ ಭರ್ತಿ ಮಾಡಲಾಗಿದೆ. |

| | | |
|---|---|---|
| | | ಬೀದರ ಜಿಲ್ಲೆ:- ಬೀದರ ಜಿಲ್ಲೆಗೆ ಕೆ.ಪಿ.ಎಸ್.ಸಿ. ಮೂಲಕ ಕಂದಾಯ ಘಟಕದಲ್ಲಿ ಪ್ರ.ದ.ಸ. ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ.<br>ರಾಯಚೂರು ಜಿಲ್ಲೆ:- ರಾಯಚೂರು ಜಿಲ್ಲೆಗೆ ಕೆ.ಪಿ.ಎಸ್.ಸಿ. ಮೂಲಕ ಕಂದಾಯ ಘಟಕದಲ್ಲಿ ಪ್ರ.ದ.ಸ. ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ.<br>ಕೊಪ್ಪಳ ಜಿಲ್ಲೆ:- 2019ನೇ ಸಾಲಿನಲ್ಲಿ 1 ಪ್ರ.ದ.ಸ. ಹುದ್ದೆಯನ್ನು ಭರ್ತಿ ಮಾಡಲಾಗಿದೆ. ಹಾಗೂ 1 ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| (ಈ) | ಸರ್ಕಾರದ ವಿಳಂಬ ನೀತಿಯಿಂದ ಎಫ್.ಡಿ.ಎ ಹುದ್ದೆಗಳ ನೇಮಕಾತಿಯಿಂದ ಆ ಭಾಗದ ಅರ್ಹ ನಿರುದ್ಯೋಗಿ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿಲ್ಲವೇ ಮತ್ತು ಇದರಿಂದ ಆ ಭಾಗದ ಆಡಳಿತದ ನಿತ್ಯ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ತೊಂದರೆಯಾಗುತ್ತಿಲ್ಲವೇ; ಸರಿಪಡಿಸಲು ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ನೇರ ನೇಮಕಾತಿ ಕೋಟಾದಡಿಯಲ್ಲಿ ಖಾಲಿಯಾಗುತ್ತಿರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗನುಗುಣವಾಗಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ.ಗೆ ಆಗಿಂದಾಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಕೆ.ಪಿ.ಎಸ್.ಸಿ.ಯಿಂದ ಖಾಲಿ ಹುದ್ದೆಗಳಿಗೆ ಆಯ್ಕೆಪಟ್ಟಿ ಸ್ವೀಕೃತವಾದ ಕೂಡಲೇ ಅಭ್ಯರ್ಥಿಗಳ ಶೈಕ್ಷಣಿಕ ಮತ್ತು ಮೀಸಲಾತಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿ ನೇಮಕಾತಿ ಆದೇಶ ಹೊರಡಿಸಲಾಗುವುದು. ಹಾಗೂ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ<br>ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದ ಕೆಲಸವನ್ನು ಪಡೆಯಲಾಗುತ್ತಿದ್ದು, ಆಡಳಿತದ ನಿತ್ಯ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. |
| (ಉ) | ಖಾಲಿ ಇರುವ ಎಫ್.ಡಿ.ಎ ಹುದ್ದೆಗಳನ್ನು ಯಾವ ನಿಗಧಿತ ಅವಧಿಯಲ್ಲಿ ನೇರ ನೇಮಕಾತಿ ಮಾಡಿಕೊಳ್ಳುವ ಮೂಲಕ ಅರ್ಹ ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಒದಗಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | |

ಸಂಖ್ಯೆ: ಕಂಇ 64 ಬಿಎಸ್‌ಐ 2020

(ಆರ್. ಅಶೋಕ)

ಕಂದಾಯ ಸಚಿವರು